ಸಾಲ ಅಥವಾ ಬಡ್ಡಿಯ ಮನ್ನಾ ಮಾಡುವ ಪ್ರಸ್ತಾವನೆಗಳನ್ನು ಯೋಜನೆಗಳ ವಿಫಲತೆ, ಮಾರುಕಟ್ಟೆಯಲ್ಲಿ ಉತ್ಪನ್ನಗಳ ಬಗ್ಗೆ ಪೈಪೋಟಿ, ಅವಶ್ಯಕ ಕಚ್ಚಾವಸ್ತುಗಳ ಕೊರತೆ ಅವಶ್ಯಕ ವಿದ್ಯುಚ್ಛಕ್ತಿಯ ಅಭಾವ, ಸಕಾಲಿಕ ಕಾರ್ಯಶೀಲ ಬಂಡವಾಳದ ಕೊರತೆ ಯಂತ್ರಗಳ ಸ್ಥಗಿತ, ಮುಖ್ಯ ಉತ್ತೇಜಕರ ಮರಣ, ಉತ್ತೇಜಕರಲ್ಲಿ ವಿವಾದ, ಸರ್ಕಾರದ ನೀತಿಗಳಲ್ಲಿ ಬದಲಾವಣೆ ಇತ್ಯಾದಿಗಳು ಕಾರಣವಾಗಿರುತ್ತದೆ.

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸಿಡೇದಹಳ್ಳಿ ಗ್ರಾಮದಲ್ಲಿ ಗೆಳೆಯರ ಬಳಗದ 1000 ನಿವೇಶನಗಳು

5020 - ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸಿಡೇದಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಗೆಳೆಯರ ಬಳಗದ ಸುಮಾರು 1000 ನಿವೇಶನಗಳಿಗೆ ಬಿ.ಡಿ.ಎ. ಅನುಮತಿ ನೀಡಿದೆಯೇ?*

ಆ) *ಈ ಸಹಕಾರ ಸಂಘಕ್ಕೆ ಅನುಮತಿ ನೀಡಲಾಗಿದ್ದಲ್ಲಿ ಬಿ.ಡಿ.ಎ.ಗೆ ಕಟ್ಟಿರುವ ಅಭಿವೃದ್ಧಿ ಶುಲ್ಕದ ಹಣ ಎಷ್ಟು? ಮತ್ತು ಶೇಕಡ 50 ಸಿ.ಎ. ಜಾಗಗಳನ್ನು ಸರ್ಕಾರದ ವಶಕ್ಕೆ ನೀಡಲಾಗಿದೆಯೆ? ವಿವರ ನೀಡುವುದು?*

ಇ) *ಈ ಸಹಕಾರ ಸಂಘ ಅನಧಿಕೃತವಾಗಿದ್ದರೆ ತೆರವುಗೊಳಿಸಲು ಬಿ.ಡಿ.ಎ. ತೆಗೆದು ಕೊಂಡಿರುವ ಕಾನೂನು ಕ್ರಮಗಳೇನು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಸಿಡೇದಹಳ್ಳಿ ಗ್ರಾಮದಲ್ಲಿ ಗೆಳೆಯರ ಬಳಗದವರು ಬಡಾವಣೆ ನಿರ್ಮಿಸಿರುವುದಿಲ್ಲ. ಆದಾಗ್ಯೂ ಆತ್ಮೀಯ ಗೆಳೆಯರ ಬಳಗ ಗೃಹ ನಿರ್ಮಾಣ ಸಹಕಾರ ಸಂಘದವರು ಚಿಕ್ಕಸಂದ್ರ ಗ್ರಾಮ ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇಲ್ಲಿ ಅನಧಿಕೃತವಾಗಿ ಬಡಾವಣೆಯನ್ನು ನಿರ್ಮಿಸಿರುತ್ತಾರೆ.

ಆ) ಅನುಮತಿ ನೀಡದೇ ಇರುವುದರಿಂದ ಹಣ ಕಟ್ಟಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಆದಾಗ್ಯೂ ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ ಬಡಾವಣೆಯನ್ನು ನೆಲಸಮ ಮಾಡುವ ಬಗ್ಗೆ ತಡೆಯಾಜ್ಞೆ ನೀಡಿರುತ್ತದೆ.

ಬೆಂಗಳೂರು ಹೊರವಲಯಕ್ಕೆ ನೀರು ಸರಬರಾಜಿನ ಯೋಜನೆ

5022 - ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಹೊರವಲಯದಲ್ಲಿರುವ ನಗರಸಭೆ ಮತ್ತು ಪುರಸಭೆಗಳಿಗೆ ಜಲ ಮಂಡಲಿಯವರಿಂದ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜು ವೆಚ್ಚ ಎಷ್ಟು?*

ಆ) *ಈ ಯೋಜನೆಯ ಅಂದಾಜು ವೆಚ್ಚವನ್ನು ತಯಾರು ಮಾಡಲು ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ?*

ಇ) *ಈ ಯೋಜನೆಯು ಎಂದು ಪ್ರಾರಂಭಗೊಳ್ಳಲಿದೆ ಮತ್ತು ಎಂದು ಪೂರ್ಣಗೊಳಲ್ಲಿದೆ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ರೂ. 262.67 ಕೋಟಿಗಳು.

ಆ) ಮೆ. ಕಿರ್ಲೋಸ್ಕರ್ ಕನ್ಸಲ್ಟೆಂಟ್ ಸಂಸ್ಥೆಗೆ ನೀಡಲಾಗಿದೆ.

ಇ) ಕಾರ್ಯ ಸಾಧ್ಯತಾ ವರದಿ ಬಂದ ನಂತರ ಹಾಗೂ ಆರ್ಥಿಕ ವ್ಯವಸ್ಥೆಯ ಬಗ್ಗೆ ನಿರ್ಧಾರವಾದ ನಂತರ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ತಗುಲಿ ಮೃತಪಟ್ಟ ದಿನಗೂಲಿ ನೌಕರರಿಗೆ ಪರಿಹಾರ

5023 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಪೀಣ್ಯಾದ ಸಮೀಪದಲ್ಲಿ ಎಲೆಕ್ಟ್ರಿಕ್ ಟವರ್ ನಿರ್ಮಿಸುವ (ದಿನಾಂಕ 3.3.2000) ಸಂದರ್ಭದಲ್ಲಿ ಆದ ಅಪಘಾತದಲ್ಲಿ ಇಬ್ಬರು ದಿನಗೂಲಿ ನೌಕರರು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಅಪಘಾತಕ್ಕೆ ಕಾರಣರಾದಂತಹ ವಿಡಿಯಾ ಲಿಮಿಟೆಡ್ ಕಾರ್ಖಾನೆಯವರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ?*

ಇ) *ಈ ಅಪಘಾತದಲ್ಲಿ ಮೃತಪಟ್ಟ ದಿನಗೂಲಿ ಕಾರ್ಮಿಕ ಕುಟುಂಬದವರಿಗೆ ನೀಡಿರುವ ಪರಿಹಾರ ಧನ ಎಷ್ಟು?*

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಬಂದಿದೆ.

ಆ) ವಿಡಿಯಾ ಲಿಮಿಟೆಡ್ ಕಾರ್ಖಾನೆಯವರು ತಮ್ಮ ಕಾರ್ಖಾನೆಗೆ ವಿದ್ಯುತ್ ಮಾರ್ಗವನ್ನು ತಾವೇ ಸ್ವಯಂ ನಿರ್ವಹಿಸುತ್ತಿರುವಾಗ ಎಲೆಕ್ಟ್ರಿಕ್ ಟವರ್‌ಗೆ ತಂತಿ ಅಳವಡಿಸುವ ಸಮಯದಲ್ಲಿ ಸಂಭವಿಸಿದ ಮೆಕ್ಯಾನಿಕಲ್ ಅಪಘಾತದ ಬಗ್ಗೆ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರವರು ತನಿಖೆ ಪಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವರು.